"ಮಧುರ ಮಕ್ಕಳೇ- ತಾವು ಎಷ್ಟೆಷ್ಟು ತಂದೆಯನ್ನು ಪ್ರೀತಿಯಿಂದ ನೆನಪು ಮಾಡುತ್ತೀರೋ ಅಷ್ಟೇ ಆಶೀರ್ವಾದ ಸಿಗುತ್ತದೆ, ಪಾಪ ನಾಶವಾಗುತ್ತದೆ"

ಪ್ರಶ್ನೆ: ತಂದೆಯು ಮಕ್ಕಳಿಗೆ ಯಾವ ಧರ್ಮದಲ್ಲಿ ಸ್ಥಿತರಾಗುವ ಮತವನ್ನು ಕೊಡುತ್ತಾರೆ?

ಉತ್ತರ: ತಂದೆಯು ತಿಳಿಸುತ್ತಾರೆ- ಮಕ್ಕಳೇ, ತಾವು ತಮ್ಮ ವಿಚಿತ್ರವಾದ (ಆತ್ಮ) ಧರ್ಮದಲ್ಲಿ ಸ್ಥಿತರಾಗಿ, ಚಿತ್ರದ (ಶರೀರ) ಧರ್ಮದಲ್ಲಿ ಅಲ್ಲ. ಹೇಗೆ ತಂದೆಯು ವಿದೇಹಿ, ವಿಚಿತ್ರವಾಗಿದ್ದಾರೆ ಹಾಗೆಯೇ ಮಕ್ಕಳೂ ಸಹ ವಿಚಿತ್ರ ಮತ್ತು ಈ ಶರೀರದಲ್ಲಿ ಬರುತ್ತಾರೆ. ಈಗ ತಂದೆಯು ಮಕ್ಕಳಿಗೆ ಹೇಳುತ್ತಾರೆ- ಮಕ್ಕಳೇ, ವಿಚಿತ್ರರಾಗಿ ತಮ್ಮ ಸ್ವಧರ್ಮದಲ್ಲಿ ಸ್ಥಿತರಾಗಿ, ದೇಹಾಭಿಮಾನದಲ್ಲಿ ಬರಬಾರದು.

ಪ್ರಶ್ನೆ: ಪರಮಾತ್ಮನೂ ಸಹ ಡ್ರಾಮಾದ ಯಾವ ಮಾತಿನಲ್ಲಿ ಬಂಧಿತರಾಗಿದ್ದಾರೆ?

ಉತ್ತರ: ಡ್ರಾಮಾದನುಸಾರ ಮಕ್ಕಳನ್ನು ಪತಿತರಿಂದ ಪಾವನ ಮಾಡುವುದರಲ್ಲಿ ಭಗವಂತನು ಬಂಧಿತನಾಗಿದ್ದಾರೆ. ಅವರು ಪುರುಷೋತ್ತಮ ಸಂಗಮಯುಗದಲ್ಲಿ ಬರಲೇಬೇಕಾಗುತ್ತದೆ.

ಓಂ ಶಾಂತಿ. ತಂದೆಯು ಕುಳಿತು ಆತ್ಮೀಯ ಮಕ್ಕಳಿಗೆ ತಿಳಿಸುತ್ತಾರೆ- ಯಾವಾಗ ಓಂ ಶಾಂತಿ ಎಂದು ಹೇಳುತ್ತೇವೆಂದರೆ ತಮ್ಮ ಆತ್ಮದ ಸ್ವಧರ್ಮದ ಪರಿಚಯವನ್ನು ಕೊಡಲಾಗುತ್ತದೆ ಆದ್ದರಿಂದ ತಂದೆಯ ನೆನಪು ಸಹಜವಾಗಿ ಬರುತ್ತದೆ ಏಕೆಂದರೆ ಪ್ರತಿಯೊಬ್ಬ ಮನುಷ್ಯನು ಪರಮಾತ್ಮನನ್ನೇ ನೆನಪು ಮಾಡುತ್ತಾರೆ. ಕೇವಲ ಪರಮಾತ್ಮನ ಪೂರ್ಣ ಪರಿಚಯವಿಲ್ಲ. ಪರಮಾತ್ಮನು ತನ್ನ ಮತ್ತು ಆತ್ಮದ ಪರಿಚಯವನ್ನು ಕೊಡುವುದಕ್ಕಾಗಿಯೇ ಬರುತ್ತಾರೆ. ಪತಿತ-ಪಾವನ ಎಂದು ಪರಮಾತ್ಮನಿಗೇ ಹೇಳಲಾಗುತ್ತದೆ. ಪತಿತರಿಂದ ಪಾವನ ಮಾಡುವುದಕ್ಕಾಗಿ ಪರಮಾತ್ಮನು ಡ್ರಾಮದಲ್ಲಿ ಬಂಧಿತರಾಗಿದ್ದಾರೆ. ಅವರೂ ಸಹ ಪುರುಷೋತ್ತಮ ಸಂಗಮಯುಗದಲ್ಲಿ ಬರಬೇಕಾಗುತ್ತದೆ. ಸಂಗಮಯುಗದ ಪರಿಚಯವನ್ನು ಕೊಡುತ್ತಾರೆ. ಹಳೆಯ ಪ್ರಪಂಚ ಮತ್ತು ಹೊಸ ಪ್ರಪಂಚದ ಮಧ್ಯದಲ್ಲಿ ತಂದೆಯು ಬರುತ್ತಾರೆ. ಹಳೆಯ ಪ್ರಪಂಚವನ್ನು ಮೃತ್ಯುಲೋಕ, ಹೊಸ ಪ್ರಪಂಚವನ್ನು ಅಮರಲೋಕವೆಂದು ಹೇಳಲಾಗುತ್ತದೆ. ಮೃತ್ಯುಲೋಕದಲ್ಲಿಯೂ ಸಹ ಆಯಸ್ಸು ಕಡಿಮೆಯಿರುತ್ತದೆ ಎಂಬುದನ್ನು ತಿಳಿದಿದ್ದೀರಲ್ಲವೆ. ಅಕಾಲ ಮೃತ್ಯುವಿರುವುದಿಲ್ಲ. ಅದು ಅಮರಲೋಕ, ಅಲ್ಲಿ ಅಕಾಲಮೃತ್ಯು ಇರುವುದಿಲ್ಲ ಏಕೆಂದರೆ ಅಪವಿತ್ರವಾಗಿದೆ. ಅಪವಿತ್ರತೆಯಿರುವ ಕಾರಣ ವ್ಯಭಿಚಾರಿಗಳಾಗುತ್ತೀರಿ ಮತ್ತು ಆಯಸ್ಸು ಕಡಿಮೆಯಾಗುತ್ತದೆ. ಶಕ್ತಿಯು ಕಡಿಮೆಯಾಗುತ್ತದೆ. ಸತ್ಯಯುಗದಲ್ಲಿ ಪವಿತ್ರರಾಗಿರುವ ಕಾರಣ ಅವ್ಯಭಿಚಾರಿಯಾಗಿರುತಾರೆ. ಶಕ್ತಿಯೂ ಸಹ ಹೆಚ್ಚಾಗಿರುತ್ತದೆ. ಶಕ್ತಿಯಿಲ್ಲದೆ ರಾಜ್ಯವನ್ನು ಹೇಗೆ ಪ್ರಾಪ್ತಿ ಮಾಡಿಕೊಳ್ಳುತ್ತೀರಿ? ಅವಶ್ಯವಾಗಿ ತಂದೆಯಿಂದ ಆಶೀರ್ವಾದವನ್ನು ಪಡೆದುಕೊಂಡಿರಬಹುದು. ತಂದೆಯು ಸರ್ವಶಕ್ತಿವಂತನಾಗಿದ್ದಾರೆ. ಆಶೀರ್ವಾದವನ್ನು ಹೇಗೆ ಪಡೆದುಕೊಂಡಿರಬಹುದು? ತಂದೆಯು ತಿಳಿಸುತ್ತಾರೆ- ನನ್ನನ್ನು ನೆನಪು ಮಾಡಿ. ಯಾರು ಹೆಚ್ಚು ನೆನಪು ಮಾಡಿರುತ್ತಾರೆಯೋ ಅವರು ಆಶೀರ್ವಾದವನ್ನು ಪಡೆದುಕೊಂಡಿರಬಹುದು. ಆಶೀರ್ವಾದ ಬೇಡುವಂತಹ ವಸ್ತುವಲ್ಲ. ಇದಂತೂ ಪರಿಶ್ರಮ ಪಡುವಂತದ್ದಾಗಿದೆ. ಯಾರು ಹೆಚ್ಚು ನೆನಪು ಮಾಡುತ್ತಾರೆ ಅವರು ಅಷ್ಟೇ ಹೆಚ್ಚು ಆಶೀರ್ವಾದವನ್ನು ಪಡೆಯುತ್ತಾರೆ ಅರ್ಥಾತ್ ಶ್ರೇಷ್ಠ ಪದವಿ ಸಿಗುತ್ತದೆ. ನೆನಪು ಮಾಡುವುದಿಲ್ಲವೆಂದರೆ ಆಶೀರ್ವಾದ ಸಿಗುವುದಿಲ್ಲ. ಲೌಕಿಕ ತಂದೆ ಮಕ್ಕಳಿಗೆ ನನ್ನನ್ನು ನೆನಪು ಮಾಡಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಬಾಲ್ಯತನದಿಂದ ತಾನಾಗಿಯೇ ತಂದೆ-ತಾಯಿಯನ್ನಾಗಿ ಮಾಡಿಕೊಳ್ಳುತ್ತಾರೆ. ಇಂದ್ರಿಯಗಳು ಚಿಕ್ಕದಾಗಿರುತ್ತವೆ, ದೊಡ್ಡ ಮಕ್ಕಳು ಎಂದೂ ಸಹ ಬಾಬಾ, ಬಾಬಾ, ಮಮ್ಮಾ-ಮಮ್ಮಾ ಎಂದು ಹೇಳುವುದಿಲ್ಲ. ಅವರ ಬುದ್ಧಿಯಲ್ಲಿರುತ್ತದೆ- ಇವರು ಮಾತಾಪಿತನಾಗಿದ್ದಾರೆ. ಅವರಿಂದ ಆಸ್ತಿಯು ಸಿಗುತ್ತದೆ. ಹೇಳುವಂತಹ ಅಥವಾ ನೆನಪು ಮಾಡುವ ಮಾತು ಬರುವುದಿಲ್ಲ. ಇಲ್ಲಿ ತಂದೆಯು ತಿಳಿಸುತ್ತಾರೆ- ನನ್ನನ್ನು ಮತ್ತು ಆಸ್ತಿಯನ್ನು ನೆನಪು ಮಾಡಿ. ಹದ್ದಿನ ಸಂಬಂಧವನ್ನು ಬಿಟ್ಟು ಬೇಹದ್ದಿನ ಸಂಬಂಧವನ್ನು ನೆನಪು ಮಾಡಬೇಕು. ಮನುಷ್ಯರೆಲ್ಲರೂ ಗತಿ (ಮುಕ್ತಿ) ಯನ್ನು ಇಷ್ಟಪಡುತ್ತಾರೆ. ಗತಿ ಎಂದು ಮುಕ್ತಿಧಾಮಕ್ಕೆ ಹೇಳಲಾಗುತ್ತದೆ. ಪುನಃ ಸುಖಧಾಮಕ್ಕೆ ಬರುವುದನ್ನು ಸದ್ಗತಿ ಎಂದು ಹೇಳಲಾಗುತ್ತದೆ. ಯಾರು ಮೊದಲು ಬರುತ್ತಾರೆ ಅವರು ಸುಖವನ್ನು ಪಡೆಯುತ್ತಾರೆ. ತಂದೆಯು ಸುಖವನ್ನು ಕೊಡಲು ಬರುತ್ತಾರೆ. ಅವಶ್ಯವಾಗಿ ಯಾವುದಾದರೂ ಮಾತಿನಲ್ಲಿ ಕಷ್ಟವಿರುತ್ತದೆ ಆದ್ದರಿಂದ ಇದಕ್ಕೆ ಶ್ರೇಷ್ಠ ವಿದ್ಯೆಯೆಂದು ಹೇಳಲಾಗುತ್ತದೆ. ಎಷ್ಟು ಶ್ರೇಷ್ಠ ವಿದ್ಯೆಯೇ ಅಷ್ಟೇ ಕಷ್ಟವಿರುತ್ತದೆ. ಎಲ್ಲರೂ ಉತ್ತೀರ್ಣರಾಗಲು ಸಾಧ್ಯವಿಲ್ಲ. ಅತೀ ದೊಡ್ಡ ಪರೀಕ್ಷೆಯಲ್ಲಿ ತುಂಬಾ ಕಡಿಮೆ ವಿದ್ಯಾರ್ಥಿಗಳು ಪಾಸ್ ಆಗುತ್ತಾರೆ ಏಕೆಂದರೆ ದೊಡ್ಡ ಪರೀಕ್ಷೆಯನ್ನು ಪಾಸ್ ಮಾಡಿದರೆ ಸರ್ಕಾರ ನೌಕರಿಯನ್ನೂ ಸಹ ಕೊಡಬೇಕಾಗುತ್ತದೆ. ಕೆಲವು ವಿದ್ಯಾರ್ಥಿಗಳು ದೊಡ್ಡ ಪರೀಕ್ಷೆಯನ್ನು ಪಾಸ್ ಮಾಡಿ ಸುಮ್ಮನೆ ಕುಳಿತಿರುತ್ತಾರೆ. ದೊಡ್ಡ ಸಂಬಳವನ್ನು ಕೊಡಲು ಸರ್ಕಾರದಲ್ಲಿ ಇಷ್ಟು ಹಣವಿರುವುದಿಲ್ಲ. ನೀವು ಎಷ್ಟು ಶ್ರೇಷ್ಠರಾಗುತ್ತೀವೆ ಅಷ್ಟು ಶ್ರೇಷ್ಠ ಪದವಿಯನ್ನು ಪಡೆದುಕೊಳ್ಳುತ್ತೀರಿ ಈ ರೀತಿ ಎಲ್ಲರೂ ರಾಜರು ಅಥವಾ ಸಾಹುಕಾರರು ಆಗುತ್ತಾರೆ ಎಂದು ತಂದೆಯು ತಿಳಿಸುತ್ತಾರೆ. ಆಧಾರವೆಲ್ಲವೂ ವಿದ್ಯೆಯ ಮೇಲಿದೆ. ಭಕ್ತಿಗೆ ವಿದ್ಯೆ ಎಂದು ಹೇಳುವುದಿಲ್ಲ. ಇದಾಗಿದೆ

ಆತ್ಮೀಯ ಜ್ಞಾನ, ಆತ್ಮೀಯ ತಂದೆಯು ಓದಿಸುತ್ತಾರೆ. ಎಷ್ಟು ಶ್ರೇಷ್ಠ ವಿದ್ಯೆಯಾಗಿದೆ. ಮಕ್ಕಳಿಗೆ ಕಷ್ಟವಾಗುತ್ತದೆ ಏಕೆಂದರೆ ತಂದೆಯನ್ನು ನೆನಪು ಮಾಡುವುದಿಲ್ಲವೆಂದರೆ ವ್ಯಕ್ತಿತ್ವ ಸುಧಾರಣೆಯಾಗುವುದಿಲ್ಲ. ಯಾರು ಚೆನ್ನಾಗಿ ನೆನಪು ಮಾಡುತ್ತಾರೆ ಅವರ ವ್ಯಕ್ತಿತ್ವ ಸುಧಾರಣೆಯಾಗುತ್ತದೆ. ಬಹಳ-ಬಹಳ ಮಧುರ ಸೇವಾಧಾರಿ (ಸರ್ವೀಸೇಬಲ್) ಆಗುತ್ತಾರೆ. ವ್ಯಕ್ತಿತ್ವ ಚೆನ್ನಾಗಿಲ್ಲವೆಂದರೆ ಯಾರಿಗೂ ಇಷ್ಟವಾಗುವುದಿಲ್ಲ. ಯಾರು ಫೇಲ್ ಆಗುತ್ತಾರೆಯೋ ಅವರ ವ್ಯಕ್ತಿತ್ವದಲ್ಲಿ ಅವಶ್ಯವಾಗಿ ಕಲೆ (ಮಚ್ಚೆ) ಇರುತ್ತದೆ. ಶ್ರೀ ಲಕ್ಷ್ಮೀ-ನಾರಾಯಣರ ವ್ಯಕ್ತಿತ್ವ ಒಳ್ಳೆಯದಾಗಿರುತ್ತದೆ. ರಾಮನಿಗೆ ಎರಡು ಕಲೆಗಳು ಕಡಿಮೆಯೆಂದು ಹೇಳಲಾಗುತ್ತದೆ. ಭಾರತ ರಾವಣರಾಜ್ಯದಲ್ಲಿ ಅಸತ್ಯ ಖಂಡವಾಗುತ್ತದೆ. ಸತ್ಯಖಂಡದಲ್ಲಿ ಸ್ವಲ್ಪವೂ ಸಹ ಅಸತ್ಯವಿರುವುದಿಲ್ಲ. ರಾವಣರಾಜ್ಯದಲ್ಲಿ ಸುಳ್ಳು ಎಂದರೆ ಸುಳ್ಳು. ಅಸತ್ಯ ಮನುಷ್ಯರನ್ನು ದೈವೀಗುಣವುಳ್ಳವರೆಂದು ಹೇಳಲು ಸಾಧ್ಯವಿಲ್ಲ. ಇದು ಬೇಹದ್ದಿನ ಮಾತಾಗಿದೆ. ಈಗ ತಂದೆಯು ತಿಳಿಸುತ್ತಾರೆ- ಇಂತಹ ಅಸತ್ಯದ ಮಾತನ್ನು ಕೇಳಬೇಡಿ ಅಥವಾ ಹೇಳಬೇಡಿ. ಒಬ್ಬ ಈಶ್ವರನ ಮತಕ್ಕೆ ನ್ಯಾಯವಾದ ಮತವೆಂದು ಹೇಳಲಾಗುತ್ತದೆ. ಮನುಷ್ಯರ ಮತಕ್ಕೆ ಅನ್ಯಾಯದ ಮತವೆಂದು ಹೇಳಲಾಗುತ್ತದೆ. ನ್ಯಾಯವಾದ ಮತದಿಂದ ನಾವು ಶ್ರೇಷ್ಠರಾಗುತ್ತೇವೆ ಆದರೆ ಎಲ್ಲರೂ ನಡೆಯುವುದಕ್ಕೆ ಸಾಧ್ಯವಿಲ್ಲದೆ ಇರುವುದರಿಂದ ನ್ಯಾಯಕ್ಕೆ ವಿರುದ್ಧವಾಗಿ ನಡೆಯುತ್ತಾರೆ. ಕೆಲವರು ತಂದೆಗೆ ಪ್ರತಿಜ್ಞೆ ಮಾಡುತ್ತಾರೆ- ಬಾಬಾ, ಇಷ್ಟು ಸಮಯ ನಾವು ಕಾನೂನಿಗೆ ವಿರುದ್ಧವಾದ ಕಾರ್ಯವನ್ನು ಮಾಡಿದ್ದೇವೆ, ಇನ್ನು ಮುಂದೆ ಮಾಡುವುದಿಲ್ಲ. ಎಲ್ಲದಕ್ಕಿಂತ ಕಾನೂನಿಗೆ ವಿರುದ್ಧವಾಗಿರುವುದು ಕಾಮದ ಭೂತವಾಗಿದೆ. ದೇಹದ ಅಭಿಮಾನ ಎಲ್ಲರಲ್ಲಿಯೂ ಇದೆ. ಮಾಯಾವೀ ಪುರುಷರಲ್ಲಿ ದೇಹಾಭಿಮಾನವಿರುತ್ತದೆ. ತಂದೆಯು ವಿದೇಹಿಯಾಗಿದ್ದಾರೆ, ವಿಚಿತ್ರನಾಗಿದ್ದಾರೆ. ಮಕ್ಕಳೂ ಸಹ ವಿಚಿತ್ರವಾಗಿದ್ದಾರೆ. ಇವು ತಿಳಿಯುವ ಮಾತುಗಳಾಗಿವೆ. ನಾನು ಆತ್ಮ ವಿಚಿತ್ರನಾಗಿದ್ದೇನೆ ನಂತರ ಈ ಚಿತ್ರ (ದೇಹ) ದಲ್ಲಿ ಬರುತ್ತೇನೆ. ಈಗ ತಂದೆಯು ಪುನಃ ಹೇಳುತ್ತಾರೆ- ವಿಚಿತ್ರರಾಗಿ. ಸ್ವಧರ್ಮದಲ್ಲಿ ಸ್ಥಿತರಾಗಿ ಚಿತ್ರದ ಧರ್ಮದಲ್ಲಿ ಎಂದೂ ಸ್ಥಿತರಾಗಬೇಡಿ. ವಿಚಿತ್ರ ಧರ್ಮದಲ್ಲಿ ಸ್ಥಿತರಾಗಿ. ದೇಹಾಭಿಮಾನದಲ್ಲಿ ಬರಬಾರದು. ತಂದೆಯು ಎಷ್ಟು ತಿಳಿಸುತ್ತಾರೆ- ಇದರಲ್ಲಿ ನೆನಪು ಬಹಳ ಅವಶ್ಯಕತೆಯಿದೆ. ತಂದೆಯು ತಿಳಿಸುತ್ತಾರೆ - ತಮ್ಮನ್ನು ತಾವು ಆತ್ಮನೆಂದು ತಿಳಿದು ತಂದೆಯನ್ನು ನೆನಪು ಮಾಡುವುದರಿಂದ ತಾವು ಸತೋಪ್ರಧಾನರಾಗುತ್ತೀರಿ, ಪವಿತ್ರರಾಗುತ್ತೀರಿ. ಅಪವಿತ್ರತೆಯಲ್ಲಿ ಹೋಗುವುದರಿಂದ ಬಹಳ ಶಿಕ್ಷೆಯನ್ನು ಪಡೆಯಬೇಕಾಗುತ್ತದೆ. ತಂದೆಯ ಮಕ್ಕಳಾದ ನಂತರ ಯಾವುದೇ ತಪ್ಪನ್ನು ಮಾಡಿದರೆ ಉಳಿಯಲು ಸಾಧ್ಯವಿಲ್ಲ. ಗಾಯನವೂ ಇದೆಯಲ್ಲವೆ- ಸದ್ಗುರುವಿನ ನಿಂಧಕರು ಉಳಿಯಲು ಸಾಧ್ಯವಿಲ್ಲ. ಒಂದುವೇಳೆ ನನ್ನ ಮತದಂತೆ ನಡೆದು ಪವಿತ್ರರಾಗುವುದಿಲ್ಲವೆಂದರೆ 100 ಪಟ್ಟು ಶಿಕ್ಷೆಯನ್ನು ಪಡೆಯಬೇಕಾಗುತ್ತದೆ. ವಿವೇಕವನ್ನು ಉಪಯೋಗಿಸಬೇಕು. ಒಂದುವೇಳೆ ನೆನಪು ಮಾಡುವುದಕ್ಕೆ ಆಗುವುದಿಲ್ಲವೆಂದರೆ ಶ್ರೇಷ್ಠಪದವಿ ಪಡೆಯಲು ಸಾಧ್ಯವಿಲ್ಲ. ಪುರುಷಾರ್ಥವನ್ನು ಮಾಡಲು ಸಮಯವನ್ನು ಕೊಡುತ್ತಾರೆ. ಯಾವ ತನುವಿನಲ್ಲಿ ತಂದೆಯು ಬರುತ್ತಾರೆ ಅವರು ಪ್ರಜಾಪಿತ ಬ್ರಹ್ಮನಾಗಿದ್ದಾರೆ ಅವರೂ ಸಹ ಮನುಷ್ಯನಾಗಿದ್ದಾರಲ್ಲವೆ! ಮನುಷ್ಯನ ಹೆಸರು ಶರೀರದ ಮೇಲೆ ಇರುತ್ತದೆ. ಶಿವತಂದೆಯು ಮನುಷ್ಯ ಅಥವಾ ದೇವತೆಯಲ್ಲ. ಅವರಿಗೆ ಶ್ರೇಷ್ಠ ಆತ್ಮವೆಂದು ಹೇಳಲಾಗುತ್ತದೆ. ಅವರು ಪತಿತರು ಅಥವಾ ಪಾವನರು ಆಗುವುದಿಲ್ಲ, ಅವರು ತಿಳಿಸುತ್ತಾರೆ- ನನ್ನನ್ನು ನೆನಪು ಮಾಡುವುದರಿಂದ ಪಾಪದಿಂದ ಮುಕ್ತರಾಗುತ್ತೀರಿ. ತಂದೆಯೇ ಕುಳಿತು ತಿಳಿಸುತ್ತಾರೆ- ತಾವು ಸತೋಪ್ರಧಾನರಾಗಿದ್ದಿರಿ, ಈಗ ತಮೋಪ್ರಧಾನರಾಗಿದ್ದೀರಿ. ಪುನಃ ಸತೋಪ್ರಧಾನ ಆಗಬೇಕೆಂದರೆ ತಂದೆಯನ್ನು ನೆನಪು ಮಾಡಬೇಕು. ಈ ದೇವತೆಗಳ ಅರ್ಹತೆಯನ್ನು ನೋಡಿ ಹೇಗಿದೆ ಮತ್ತು ಅವರಿಂದ ದಯೆಯನ್ನು ಬೇಡುವವರನ್ನು ನೋಡಿ ನಾವು ಏನಾಗಿದ್ದೆವು ಎಂದು ಆಶ್ಚರ್ಯವಾಗುತ್ತದೆ. ಪುನಃ 84 ಜನ್ಮಗಳಲ್ಲಿ ಎಷ್ಟು ಕೆಳಗೆ ಬಿದ್ದು ಎಲ್ಲವನ್ನೂ ಕಳೆದುಕೊಂಡಿದ್ದೇವೆ.

ತಂದೆಯು ತಿಳಿಸುತ್ತಾರೆ- ಮಧುರಾತಿ ಮಧುರ ಮಕ್ಕಳೇ, ತಾವು ದೈವೀ ವಂಶದವರಾಗಿದ್ದಿರಿ. ಈಗ ತಮ್ಮ ಚಲನೆಯು ದೇವಿ-ದೇವತಾ ಆಗುವ ರೀತಿಯಲ್ಲಿ ಇದೆಯೇ? ಎಂಬುದನ್ನು ನೋಡಿಕೊಳ್ಳಿರಿ. ಎಲ್ಲರೂ ಲಕ್ಷ್ಮೀ-ನಾರಾಯಣರಾಗುತ್ತಾರೆ ಎಂದಲ್ಲ. ಅಲ್ಲಿ ಎಲ್ಲವೂ ಹೂದೋಟ ಆಗಿಬಿಡುತ್ತದೆ. ಶಿವತಂದೆಗೆ ಕೇವಲ ಗುಲಾಬಿ ಹೂವನ್ನೇ ಹಾಕಬೇಕು. ಆದರೆ ಎಲ್ಲಾ ಹೂವನ್ನೂ ಹಾಕುತ್ತಾರೆ. ಎಕ್ಕದ ಹೂವನ್ನೂ ಸಹ ಹಾಕುತ್ತಾರೆಂದಲ್ಲ. ತಂದೆಯ ಮಕ್ಕಳು ಕೆಲವರು ಗುಲಾಬಿ ಹೂಗಳೂ ಆಗುತ್ತಾರೆ. ಕೆಲವರು ಎಕ್ಕದ ಹೂ ಸಹ ಆಗುತ್ತಾರೆ. ಪಾಸ್ ಹಾಗೂ ಫೇಲ್ ಸಹ ಆಗುತ್ತಾರೆ. ಸ್ವಯಂಗೆ ರಾಜನಾಗುವುದಿಲ್ಲವೆಂದು ಗೊತ್ತಾಗುತ್ತದೆ. ತಮ್ಮ ಸಮಾನರನ್ನಾಗಿ ಮಾಡುವುದಿಲ್ಲವೆಂದರೆ ಸಾಹುಕಾರ ಹೇಗೆ ಆಗುತ್ತಾರೆ, ಯಾರಾಗುತ್ತಾರೆ ಎಂದು ತಂದೆಗೆ ಗೊತ್ತಿದೆ. ಮುಂದೆ ಹೋದಂತೆ ತಾವು ಮಕ್ಕಳಿಗೂ ಗೊತ್ತಾಗುತ್ತದೆ-ಇಂತಹವರು ತಂದೆಯ ಕಾರ್ಯದಲ್ಲಿ ಹೇಗೆ ಸಹಯೋಗವನ್ನು ಕೊಡುತ್ತಾರೆ ಎಂದು. ಕಲ್ಪ-ಕಲ್ಪ ಯಾರೆಷ್ಟು ಮಾಡಿದ್ದರೋ ಅವರೇ ಮಾಡುತ್ತಾರೆ. ಇದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ತಂದೆಯು ಯುಕ್ತಿಗಳನ್ನು ತಿಳಿಸುತ್ತಾ ಇರುತ್ತಾರೆ. ಈ ರೀತಿ ತಂದೆಯನ್ನು ನೆನಪು ಮಾಡಬೇಕು ಮತ್ತೆ ಪರಿವರ್ತನೆಯಾಗಬೇಕು. ಭಕ್ತಿಮಾರ್ಗದಲ್ಲಿ ತಾವು ಈಶ್ವರನಿಗಾಗಿ ಮಾಡುತ್ತಾ ಬಂದಿದ್ದೀರಿ ಆದರೆ ಈಶ್ವರನನ್ನು ಯಾರೂ ತಿಳಿದುಕೊಂಡಿಲ್ಲ. ಭಗವಂತ ಶ್ರೇಷ್ಠಾತಿಶ್ರೇಷ್ಠ ಇದನ್ನು ಮಾತ್ರ ಅರ್ಥ ಮಾಡಿಕೊಂಡಿದ್ದಾರೆ. ಈ ರೀತಿ ಅಲ್ಲ ಶ್ರೇಷ್ಠಾತಿಶ್ರೇಷ್ಠ ನಾಮರೂಪದವರೆಂದು. ಅವರು ನಿರಾಕಾರನಾಗಿದ್ದಾರೆ, ಬ್ರಹ್ಮಾ-ವಿಷ್ಣು-ಶಂಕರನಿಗೆ ದೇವತೆಯೆಂದು ಹೇಳಲಾಗುತ್ತದೆ. ಬ್ರಹ್ಮಾ ದೇವತಾಯ ನಮಃ, ವಿಷ್ಣು ದೇವತಾಯ ನಮಃ ಅನಂತರ ಹೇಳುತ್ತಾರೆ- ಶಿವ ಪರಮಾತ್ಮಾಯ ನಮಃ. ಅಂದಮೇಲೆ ಪರಮಾತ್ಮ ಶ್ರೇಷ್ಠವಾಗಿದ್ದಾರಲ್ಲವೆ. ಬ್ರಹ್ಮಾ-ವಿಷ್ಣು-ಶಂಕರನನ್ನು ಪರಮಾತ್ಮನೆಂದು ಹೇಳಲಾಗುವುದಿಲ್ಲ. ಬಾಯಿಂದಲೂ ಸಹ ಹೇಳುತ್ತಾರೆ- ಶಿವ ಪರಮಾತ್ಮಾಯ ನಮಃ, ಹಾಗಾದರೆ ಪರಮಾತ್ಮ ಒಬ್ಬರಾಗುತ್ತಾರಲ್ಲವೆ. ದೇವತೆಗಳಿಗೆ ನಮಸ್ಕಾರ ಮಾಡುತ್ತಾರೆ. ಮನುಷ್ಯ ಲೋಕದಲ್ಲಿ

ಮನುಷ್ಯರನ್ನು ಮನುಷ್ಯನೆಂದು ಹೇಳಲಾಗುತ್ತದೆ. ಅವರನ್ನು ಪರಮಾತ್ಮಾಯ ನಮಃ ಎಂದು ಹೇಳುವುದು ಅಜ್ಞಾನವಾಗಿದೆ. ಎಲ್ಲರ ಬುದ್ಧಿಯಲ್ಲಿ ಈಶ್ವರನು ಸರ್ವವ್ಯಾಪಿಯೆಂದು ಇದೆ. ಈಗ ತಾವು ಮಕ್ಕಳಿಗೆ ಗೊತ್ತಿದೆ- ಪರಮಾತ್ಮನು ಒಬ್ಬರೇ ಆಗಿದ್ದಾರೆ. ಅವರಿಗೇ ಪತಿತ-ಪಾವನ ಎಂದು ಹೇಳಲಾಗುತ್ತದೆ. ಎಲ್ಲರನ್ನು ಪಾವನ ಮಾಡುವ ಕರ್ತವ್ಯ ಅವರದಾಗಿದೆ. ಯಾವುದೇ ಮನುಷ್ಯ ಜಗತ್ತಿನ ಗುರು ಆಗಲು ಸಾಧ್ಯವಿಲ್ಲ. ಗುರು ಪಾವನವಾಗಿರುತ್ತಾರೆ. ಇಲ್ಲಿ ಎಲ್ಲರೂ ವಿಕಾರದಿಂದ ಜನ್ಮ ಪಡೆಯುತ್ತಾರೆ. ಜ್ಞಾನಕ್ಕೆ ಅಮೃತವೆಂದು ಹೇಳಲಾಗುತ್ತದೆ. ತಂದೆಯು ಬಂದು ಏನು ಮಾಡುತ್ತಾರೆ. ಈಗ ತಮಗೆ ಗೊತ್ತಿದೆ, ತತ್ವವನ್ನೂ ಸಹ ಪವಿತ್ರವನ್ನಾಗಿ ಮಾಡುತ್ತಾರೆ. ಡ್ರಾಮಾದಲ್ಲಿ ಅವರ ಪಾತ್ರವಿದೆ. ತಂದೆಯು ನಿಮಿತ್ತರಾಗಿದ್ದಾರೆ, ಸರ್ವರ ಸದ್ಗತಿದಾತನಾಗಿದ್ದಾರೆ. ಈಗ ಇದನ್ನು ಹೇಗೆ ತಿಳಿಸುವುದು? ಬಹಳ ಜನರಂತೂ ಬರುತ್ತಾರೆ, ಉದ್ಘಾಟನೆಯನ್ನು ಮಾಡಲು ಯಾರಾದರೂ ಬರುತ್ತಾರೆಂದರೆ ಮುಂಬರುವ ವಿನಾಶಕ್ಕೆ ಮೊದಲು ಬೇಹದ್ದಿನ ತಂದೆಯನ್ನು ತಿಳಿದುಕೊಂಡು ಅವರಿಂದ ಆಸ್ತಿಯನ್ನು ಪಡೆಯಿರಿ ಎಂದು ಸಂದೇಶವನ್ನು ಕೊಡಬೇಕು. ಇವರು ಆತ್ಮೀಯ ತಂದೆಯಾಗಿದ್ದಾರೆ. ಎಲ್ಲಾ ಮನುಷ್ಯರು ಪರಮಾತ್ಮನನ್ನು ತಂದೆಯೆಂದು ಹೇಳುತ್ತಾರೆ. ರಚಯಿತ ಅಂದಮೇಲೆ ಅವಶ್ಯವಾಗಿ ಅವರಿಂದ ರಚನೆಗೆ ಆಸ್ತಿಯು ಸಿಗುತ್ತದೆ. ಬೇಹದ್ದಿನ ತಂದೆಯನ್ನು ಯಾರೂ ತಿಳಿದುಕೊಂಡಿಲ್ಲ. ತಂದೆಯನ್ನು ಮರೆಯುವುದು ಡ್ರಾಮಾದಲ್ಲಿ ನಿಗಧಿಯಾಗಿದೆ. ಬೇಹದ್ದಿನ ತಂದೆಗೆ ಶ್ರೇಷ್ಠಾತಿಶ್ರೇಷ್ಠ ಎಂದು ಹೇಳಲಾಗುತ್ತದೆ. ಅವರಿಂದ ಅಲ್ಪಕಾಲದ ಆಸ್ತಿಯು ಸಿಗುವುದಿಲ್ಲ. ಲೌಕಿಕ ತಂದೆಯಿದ್ದರೂ ಸಹ ಬೇಹದ್ದಿನ ತಂದೆಯನ್ನು ನೆನಪು ಮಾಡುತ್ತಾರೆ. ಸತ್ಯಯುಗದಲ್ಲಿ ಯಾರೂ ಸಹ ತಂದೆಯನ್ನು ನೆನಪು ಮಾಡುವುದಿಲ್ಲ, ಏಕೆಂದರೆ ಬೇಹದ್ದಿನ ಆಸ್ತಿಯು ಸಿಕ್ಕಿರುತ್ತದೆ. ಈಗ ತಾವು ತಂದೆಯನ್ನು ನೆನಪು ಮಾಡುತ್ತೀರಿ. ಆತ್ಮನೇ ನೆನಪು ಮಾಡುತ್ತದೆ. ನಂತರ ಆತ್ಮವೇ ತನ್ನನ್ನು ಮತ್ತು ತನ್ನ ತಂದೆಯನ್ನು, ಡ್ರಾಮವನ್ನು ಮರೆತುಬಿಡುತ್ತದೆ. ಮಾಯೆಯ ನೆರಳು ಬೀಳುತ್ತದೆ. ಸತೋಪ್ರಧಾನ ಬುದ್ಧಿಯು ಪುನಃ ತಮೋಪ್ರಧಾನವಾಗಲೇಬೇಕು. ಹೊಸಪ್ರಪಂಚದಲ್ಲಿ ದೇವಿ-ದೇವತೆಗಳು ಸತೋಪ್ರಧಾನರಾಗಿದ್ದವರು ಎಂದು ಸ್ಮೃತಿಗೆ ಬರುತ್ತದೆ, ಇದನ್ನು ಯಾರೂ ತಿಳಿದುಕೊಂಡಿಲ್ಲ. ಪ್ರಪಂಚವು ಸತೋಪ್ರಧಾನ, ಚೆನ್ನದ ಪ್ರಪಂಚವಾಗುತ್ತದೆ. ಅದಕ್ಕೆ ಹೊಸಪ್ರಪಂಚವೆಂದು ಹೇಳಲಾಗುತ್ತದೆ. ಇದು ಕಬ್ಬಿಣದ ಪ್ರಪಂಚವಾಗಿದೆ. ಈ ಎಲ್ಲಾ ಮಾತುಗಳನ್ನು ತಂದೆಯು ಮಕ್ಕಳಿಗೆ ತಿಳಿಸುತ್ತಾರೆ. ಕಲ್ಪ-ಕಲ್ಪವೂ ತಾವೇ ಪುರುಷಾರ್ಥದನುಸಾರ ಆಸ್ತಿಯನ್ನು ಪಡೆಯುತ್ತೀರಿ. ನಿಮಗೂ ಸಹ ಗೊತ್ತಾಗಿದೆ ಈಗ ನಾವು ಇಲ್ಲಿದ್ದೆವು ಪುನಃ ಕೆಳಗಡೆ ಬಂದುಬಿಟ್ಟೆವು. ತಂದೆಯೇ ಈ ರೀತಿಯಾಗುತ್ತದೆ ಎಂದು ಹೇಳುತ್ತಾರೆ, ಕೆಲವರು ನೆನಪು ಮಾಡುವುದಕ್ಕೆ ಪ್ರಯತ್ನಪಡುತ್ತಾರೆ ಆದರೆ ನೆನಪು ಉಳಿಯುವುದಿಲ್ಲ. ಇದರಲ್ಲಿ ತಂದೆ ಅಥವಾ ಟೀಚರ್ ತಾನೇ ಏನು ಮಾಡುತ್ತಾರೆ. ಯಾರಾದರೂ ಓದುವುದಿಲ್ಲವೆಂದರೆ ಟೀಚರ್ ಏನು ಮಾಡುತ್ತಾರೆ? ಟೀಚರ್ ಆಶೀರ್ವಾದ ಮಾಡಿದರೆ ಎಲ್ಲರೂ ಉತ್ತೀರ್ಣರಾಗಿಬಿಡುತ್ತಾರೆ. ಓದುವುದರಲ್ಲಿ ಬಹಳ ವ್ಯತ್ಯಾಸವಿರುತ್ತದೆ. ಇದು ಹೊಸವಿದ್ಯೆಯಾಗಿದೆ. ತಮ್ಮ ಬಳಿ ಬಹಳ ಬಡವರು, ದುಃಖಿಗಳು ಬರುತ್ತಾರೆ, ಸಾಹುಕಾರರು ಬರುವುದಿಲ್ಲ. ದುಃಖಿಗಳಾಗಿರುವ ಕಾರಣ ಬರುತ್ತಾರೆ. ಸಾಹುಕಾರರು ತಿಳಿಯುತ್ತಾರೆ- ನಾವು ಸ್ವರ್ಗದಲ್ಲಿ ಇದ್ದೇವೆ. ಅದೃಷ್ಟದಲ್ಲಿ ಇಲ್ಲ, ಯಾರ ಅದೃಷ್ಟದಲ್ಲಿ ಇದೆ, ಅವರಿಗೆ ತಕ್ಷಣ ನಿಶ್ಚಯ ಬಂದುಬಿಡುತ್ತದೆ. ನಿಶ್ಚಯ ಮತ್ತು ಸಂಶಯ ಬರುವುದರಲ್ಲಿ ತಡವಾಗುವುದಿಲ್ಲ. ಮಾಯೆಯು ತಕ್ಷಣ ಮರೆಸಿಬಿಡುತ್ತದೆ. ಸಮಯವಂತೂ ಹಿಡಿಸುತ್ತದೆ. ಇದರಲ್ಲಿ ಗೊಂದಲವಾಗುವ ಅವಶ್ಯಕತೆಯಿಲ್ಲ. ತಮ್ಮಮೇಲೆ ತಾವೇ ದಯೆತೋರಿಸಿಕೊಳ್ಳಬೇಕು. ಶ್ರೀಮತವಂತೂ ಸಿಗುತ್ತಾ ಇರುತ್ತದೆ. ಎಷ್ಟು ಸಹಜವಾಗಿ ತಂದೆಯು ತಿಳಿಸುತ್ತಾರೆ. ತಮ್ಮನ್ನು ತಾವು ಆತ್ಮವೆಂದು ತಿಳಿದು ನನ್ನನ್ನು ನೆನಪು ಮಾಡಿ.

ತಮಗೆ ತಿಳಿದಿದೆ- ಇದು ಮೃತ್ಯುಲೋಕವಾಗಿದೆ- ಅದು ಅಮರಲೋಕವಾಗಿದೆ. ಅಲ್ಲಿ ಅಕಾಲಮೃತ್ಯು ಇರುವುದಿಲ್ಲ. ಶಾಲೆಯಲ್ಲಿ ವಿದ್ಯಾರ್ಥಿಗಳು ನಂಬರ್ವಾರ್ ಆಗಿರುತ್ತಾರೆ. ಬ್ರಾಹ್ಮಣಿಯರನ್ನು ಕೇಳಲಾಗುತ್ತದೆ- ನಿಮ್ಮ ಬಳಿ ನಂಬರ್ವಾರ್ ಬುದ್ಧಿವಂತ ಮಕ್ಕಳು ಯಾರಿದ್ದಾರೆ? ಯಾರು ಚೆನ್ನಾಗಿ ಓದುತ್ತಾರೆ, ಅವರು ಬಲಗಡೆ ಇರಬೇಕು. ಬಲಗೈಯ ಮಹತ್ವವಿರುತ್ತದೆಯಲ್ಲವೆ. ಪೂಜೆಯನ್ನೂ ಸಹ ಬಲಗೈಯಿಂದ ಮಾಡಲಾಗುತ್ತದೆ. ಮಕ್ಕಳೇ ಸತ್ಯಯುಗದಲ್ಲಿ ಏನಿರುತ್ತದೆಯೆಂದು ವಿಚಾರ ಮಾಡಿ. ಸತ್ಯಯುಗ ನೆನಪಿಗೆ ಬರುತ್ತದೆ ಎಂದರೆ ಸತ್ಯತಂದೆಯ ನೆನಪು ಬರುತ್ತದೆ. ತಂದೆಯು ನಮ್ಮನ್ನು ಸತ್ಯಯುಗದ ಮಾಲೀಕರನ್ನಾಗಿ ಮಾಡುತ್ತಾರೆ. ನಾವು ಹೇಗೆ ರಾಜ್ಯಭಾಗ್ಯವನ್ನು ಪಡೆದುಕೊಂಡೆವು ಎಂದು ಅಲ್ಲಿ ನಮಗೆ ತಿಳಿದಿರುವುದಿಲ್ಲ. ಆದ್ದರಿಂದ ತಂದೆಯು ತಿಳಿಸುತ್ತಾರೆ- ಲಕ್ಷ್ಮೀ-ನಾರಾಯಣರಲ್ಲಿಯೂ ಸಹ ಜ್ಞಾನವಿಲ್ಲ. ತಂದೆಯು ಪ್ರತಿಯೊಂದು ಮಾತನ್ನು ತಿಳಿಸುತ್ತಾ ಇರುತ್ತಾರೆ. ಯಾರು ಕಲ್ಪದ ಹಿಂದೆ ತಿಳಿದುಕೊಂಡಿದ್ದಾರೆಯೋ ಅವರೇ ತಿಳಿದುಕೊಳ್ಳುತ್ತಾರೆ ಆದರೂ ಸಹ ಪುರುಷಾರ್ಥವನ್ನು ಮಾಡಬೇಕಾಗುತ್ತದೆ. ತಂದೆಯು ಓದಿಸುವುದಕ್ಕಾಗಿಯೇ ಬರುತ್ತಾರೆ. ಇದು ವಿದ್ಯೆಯಾಗಿದೆ. ಇದರಲ್ಲಿ ತಿಳುವಳಿಕೆ ಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಈ ಆತ್ಮೀಯ ವಿದ್ಯೆಯು ಬಹಳ ಶ್ರೇಷ್ಠವಾಗಿದೆ ಮತ್ತು ಕಷ್ಟವಾಗಿದೆ, ಇದರಲ್ಲಿ ಪಾಸ್ ಆಗಬೇಕೆಂದರೆ ತಂದೆಯ ನೆನಪಿನಿಂದ

ಆಶೀರ್ವಾದವನ್ನು ಪಡೆಯಬೇಕು. ತಮ್ಮ ವ್ಯಕ್ತಿತ್ವವನ್ನು ಸುಧಾರಣೆ ಮಾಡಿಕೊಳ್ಳಿ.

2. ಈಗ ಯಾವುದೇ ಅನ್ಯಾಯದ ಕೆಲಸವನ್ನು ಮಾಡಬಾರದು. ವಿಚಿತ್ರರಾಗಿ ತಮ್ಮ ಸ್ವಧರ್ಮದಲ್ಲಿ ಸ್ಥಿತರಾಗಬೇಕು ಮತ್ತು ವಿಚಿತ್ರ ತಂದೆಯ ಶ್ರೇಷ್ಠ ಮತದಂತೆ ನಡೆಯಬೇಕು.

ವರದಾನ: ತಂದೆಯ ಜೊತೆಯ ಮೂಲಕ ಪವಿತ್ರತೆಯೆಂಬ ಸ್ವಧರ್ಮವನ್ನು ಸಹಜವಾಗಿ ಪಾಲನೆ ಮಾಡುವಂತಹ ಮಾಸ್ಟರ್ ಸರ್ವಶಕ್ತಿವಂತ ಭವ

ಆತ್ಮದ ಸ್ವಧರ್ಮವು ಪವಿತ್ರತೆಯಾಗಿದೆ, ಅಪವಿತ್ರತೆಯು ಪರಧರ್ಮವಾಗಿದೆ. ಯಾವಾಗ ಸ್ವಧರ್ಮದ ನಿಶ್ಚಯವಾಯಿತೆಂದರೆ ಪರಧರ್ಮವು ಅಲುಗಾಡಿಸಲು ಸಾಧ್ಯವಾಗುವುದಿಲ್ಲ. ತಂದೆಯು ಯಾರಾಗಿದ್ದಾರೆ, ಹೇಗಿದ್ದಾರೆ, ಅವರನ್ನು ಒಂದುವೇಳೆ ಯಥಾರ್ಥವಾಗಿ ಗುರುತಿಸುತ್ತಾ, ಜೊತೆಯಿಟ್ಟುಕೊಳ್ಳುತ್ತೀರೆಂದರೆ ಪವಿತತೆಯೆಂಬ ಸ್ವಧರ್ಮವನ್ನು ಧಾರಣೆ ಮಾಡಿಕೊಳ್ಳುವುದು ಬಹಳ ಸಹಜವಾಗುತ್ತದೆ ಏಕೆಂದರೆ ಜೊತೆಗಾರನು ಸರ್ವಶಕ್ತಿವಂತನಿದ್ದಾರೆ. ಸರ್ವಶಕ್ತಿವಂತನ ಮಕ್ಕಳು ಮಾಸ್ಟರ್ ಸರ್ವಶಕ್ತಿವಂತನ ಮುಂದೆ ಅಪವಿತ್ರತೆಯು ಬರಲು ಸಾಧ್ಯವಿಲ್ಲ. ಒಂದುವೇಳೆ ಸಂಕಲ್ಪದಲ್ಲಿ ಮಾಯೆಯು ಬರುತ್ತದೆಯೆಂದರೆ, ಖಂಡಿತವಾಗಿಯೂ ಯಾವುದಾದರೂ ಗೇಟ್ ತೆರೆದಿದೆ ಅಥವ ನಿಶ್ಚಯದಲ್ಲಿ ಕೊರತೆಯಿದೆ.

ಸ್ಲೋಗನ್: ತ್ರಿಕಾಲದರ್ಶಿಯು ಯಾವುದೇ ಮಾತನ್ನು ಒಂದು ಕಾಲದ ದೃಷ್ಟಿಯಿಂದ ನೋಡುವುದಿಲ್ಲ, ಪ್ರತೀ ಮಾತಿನಲ್ಲಿ ಕಲ್ಯಾಣವೆಂದು ತಿಳಿಯುತ್ತಾರೆ.